
# ಬೇಸ್ತು

■ ನಾ. ದಾಮೋದರ ಶೆಟ್ಟಿ





ಅಮ್ಮನ ಮನೆಗೆ ಬರುವ ಅವಕಾಶಕ್ಕಾಗಿ ಸದಾ ಹಾರೈಸುವ ನಳಿನ ಈ ಬಾರಿ ಹತ್ತು ದಿವಸ ಕಳೆದರೂ ತನ್ನ ಮನೆಗೆ ಹೊರಡಲೇ ಇಲ್ಲ. ಪುಟ್ಟ ಮಗುವಿನ ಹಾಗೆ ಅಮ್ಮನ ಕೈತುತ್ತು ಹೊಟ್ಟೆಗಿಳಿಸುತ್ತಾ ಅಮ್ಮನ ಸೆರಗಿನಲ್ಲಿ ಮುಖ ಒರೆಸುತ್ತಾ ಅಮ್ಮನ ಲೋಕದಲ್ಲಿ ವಿಹರಿಸುತ್ತಾ ಇರುವುದರ ನಡುವೆ ತನ್ನ ಮನೆಯಲ್ಲಿ ಗಂಡನೆಂಬ ಪ್ರಾಣಿ ಉಂಡಿತೋ ತಿಂದಿತೋ ಎಂಬುದೂ ಮರೆತುಹೋಗಿತ್ತು. ತಂಗಿಯ ಮದುವೆಯ ಬಗ್ಗೆ ಗಂಭೀರವಾಗಿ ಆಲೋಚಿಸಲೆಂದೇ ನಳಿನ ತನ್ನ ಗಂಡನನ್ನು ಒಪ್ಪಿಸಿ ತವರುಮನೆಯಲ್ಲಿ ಠಿಕಾಣಿ ಹೂಡಿದ್ದಳು. ಮದುವೆಯ ಪ್ರಸ್ತಾಪ ಬಿಟ್ಟು ಬೇರೆಲ್ಲವನ್ನೂ ಮಾತಾಡಿಕೊಳ್ಳುತ್ತಲೇ ಹತ್ತು ದಿನಗಳನ್ನೂ ನುಂಗಿಹಾಕಿದ್ದಳು. ಹಗಲಿಡೀ ಮನೆಯಲ್ಲಿರುತ್ತಿದ್ದುದು ನಳಿನ ಹಾಗೂ ಅಮ್ಮ ಕುಮುದಮ್ಮ. ಭಾವನಾ ಮಾತಿಗೆ ಸಿಗುವುದು ಕಡಿಮೆ. ರಾತ್ರಿ ಊಟದ ಹೊತ್ತಿನಲ್ಲಿ ಸ್ವಲ್ಪಹೊತ್ತು ಮಾತನಾಡಿದರೆ ಎಷ್ಟೋ ಆಯಿತು. ಮಲ್ಲಿನಾಥನಿಗೆ ಅದೇ ಧ್ಯಾನ ಅಂದಹಾಗೆ ಅವಳ ತಲೆತುಂಬ ಜಾಟ್ ಕಂಪನಿಯಿತ್ತು.

ಭಾವನಾ ಜಾಟ್ ಕಂಪನಿ ಸೇರಿದ ನಾಲ್ಕು ವರ್ಷಕ್ಕೆ ಟೀಮಿನ ಲೀಡರ್ ಪದವಿಗೇರಿದ್ದಳು. ಅವಳು ಹುಟ್ಟಿದ್ದೇ ಜಾಟ್ ಕಂಪನಿಯ ಉದ್ಧಾರಕ್ಕಾಗಿ ಮತ್ತು ಸಹೋದ್ಯೋಗಿಗಳಿಂದ ಕೆಲಸ ತೆಗೆಯುವುದಕ್ಕಾಗಿ ಎಂಬಂತಿದ್ದಳು. ವಾರದಲ್ಲಿ ಮುಗಿಸಬೇಕಾದ ಪ್ರಾಜೆಕ್ಟನ್ನು ಮೂರೇ ದಿನದಲ್ಲಿ ಮುಗಿಸುವಂತೆ ಮಾಡಿ ತಾನು ಮಾತ್ರ ಶಹಭಾಸ್‌ಗಿರಿ ಪಡೆಯುತ್ತಿದ್ದಾಳೆ ಎಂಬುದು ಟೀಮಿನ ಇತರರ ಹಪಹಪಿಕೆ. 'ಇನ್ನೂ ಇಪ್ಪತ್ತೈದರವಳು ನಮ್ಮ ಮೇಲೆ ಸವಾರಿ ಮಾಡ್ತಾಳಲ್ಲ; ಅವಳ ಹಗಲುರಾತ್ರಿಗಳನ್ನೆಲ್ಲ ಅಮೆರಿಕಕ್ಕೆ ಮಾರಿದ್ದಷ್ಟೇ ಅಲ್ಲ; ನಮ್ಮನ್ನೂ ಬಿಡದೆ ಮಾರಿಸುತ್ತಿದ್ದಾಳಲ್ಲ' ಎಂಬುದು ಭಾವನಾ ಬಗ್ಗೆ ಇದ್ದ ಸಹೋದ್ಯೋಗಿಗಳ ಆಕ್ಷೇಪ.

'ಇವಳನ್ನೊಮ್ಮೆ ಯಾರಾದರೂ ಕಟ್ಟಿಕೊಂಡು ಹೋಗಿ ಬಿಟ್ಟರೆ ಸಾಕಿತ್ತಪ್ಪಾ.'

'ಸುಮ್ನಿರಿ, ಅವ್ಳೇನೂ ಈ ಜನ್ಮದಲ್ಲಿ ಮದುವೆಯಾಗೋಳಲ್ಲ. ನಮ್ಮನ್ನು ಮುಗಿಸೋವರೆಗೆ ಅವಳು ಎಲ್ಲೂ ಹೋಗಲ್ಲ. ಇಷ್ಟರಲ್ಲೇ ನಮ್ಮಲ್ಲಿ ಐವರಿಗೆ ನೋಟಿಸ್ ಕೊಟ್ಟಾಗಿದೆ.'

ಅಪರೂಪಕ್ಕೊಮ್ಮೆ ಭಾವನಾ ಕಚೇರಿಗೆ ಬರುವುದು ತಡವಾದರೆ ಸಹೋದ್ಯೋಗಿಗಳಿಗೆ ಜೊತೆಯಾಗಿ ಹೊರಗಿಳಿದು ಕ್ಯಾಂಟೀನಿಗೆ ಹೋಗುವುದಕ್ಕೊಂದು ಅವಕಾಶ. ಸಿಕ್ಕಿದ ಅವಕಾಶವನ್ನು ಚೆನ್ನಾಗಿಯೇ ಉಪಯೋಗಿಸಿಕೊಳ್ಳಲು ಹಲವು ನಾಲಗೆಗಳು ತುರಿಸಿಕೊಳ್ಳುತ್ತಿದ್ದುವು. ಪ್ರಯೋಜನವಿಲ್ಲದ ಮಾತುಗಳೆಂದು ಕೆಲವರು ತೆಪ್ಪಗಿದ್ದು ಕೇಳಿಸಿಕೊಳ್ಳುತ್ತಿದ್ದರು. ಇವರ ಮೌನವು ಸಮ್ಮತಿಯ ಲಕ್ಷಣವೇ? ಸಮ್ಮತಿಯಾದರೆ ಯಾರಿಗೆ ಸಮ್ಮತಿ? ಎಂಬುದೂ ಗೊತ್ತಾಗದೆ ಕೆಲವರು ತಳಮಳಿಸುತ್ತಿದ್ದರು. ಹೆಚ್ಚು ಬಹಿರಂಗವಾಗುವುದೂ ಬೇಡ; ಆಗದಿರುವುದೂ ಬೇಡ ಎಂಬ ನೆಲೆಯಲ್ಲಿ ಇನ್ನು ಕೆಲವರು ಕದ್ದು–ಖುದ್ದು ಮಾತನಾಡುತ್ತಿದ್ದರು.

ನಳಿನಾ ಅಮ್ಮನೊಂದಿಗೆ, 'ಯಾಕೋಮ್ಮಾ, ಮದುವೆಯ ವಿಚಾರ ಅವಳೊಂದಿಗೆ ಮಾತನಾಡೋದು ನನ್ನಿಂದ ಆಗ್ಲಿಕ್ಕಿಲ್ಲಾಂತಾನೇ ಅನ್ನಿಸ್ತಿದೆ' ಎಂದು ಅಸಹಾಯಕತೆ ತೋಡಿಕೊಂಡಳು.

'ನೀನು ಮತ್ತೆ ಅಕ್ಕಾಂತ ಹೇಳಿಕೊಂಡು ನಡೆದೇನು ಬಂತು?' ಎಂದು ಕುಮುದಮ್ಮ ಕುಟುಕಿದರು.

'ನೀನು ಮತ್ತೆ ತಾಯೀಂತಂದು ಏನು ಪ್ರಯೋಜನಾಯ್ತು? ನಿನಗೇ ಆಗದಿದ್ರೆ ನನಗೆಲ್ಲಿ ಆಗುತ್ತಮ್ಮಾ? ಒಂದು ಕೆಲ್ಸ ಮಾಡು, ರಾಜೂ ಮಾಮನಿಗೆ ಫೋನ್ ಮಾಡಿ ಬರ್ಲಿಕ್ಕೆ ಹೇಳು. ನಾವು ಎಷ್ಟು ಮಾತನಾಡಿದರೂ ತೇಲಿಸಿಬಿಡ್ತಾಳೆ. ಮನೆಯಲ್ಲಿ ಗಂಡಸರಿಲ್ಲಾಂತಂದರೆ ಎಷ್ಟೆಂದರೂ ಅಷ್ಟೆ' ಎಂದಳು ನಳಿನ.

'ಅವನಿಗೆ ಎಲ್ಲಿ ಬಿಡುವಿರ್ತದೆ? ಆದ್ರೂ ಕೇಳಿ ನೋಡ್ತೇನೆ' ಎಂದರು ಕುಮುದಮ್ಮ.

'ಹಾಗಾದ್ರೆ ಭಾನುವಾರ ನಾನು ಹೊರಡ್ತೇನೆ. ಮಾವ ಬರೋದಿವಸ ತಿಳಿಸಿದ್ರೆ ಹೇಗಾದ್ರೂ ಇವರನ್ನು ಒಪ್ಪಿಸಿ ಬಂದುಬಿಡ್ತೇನೆ. ಮನೆಯಲ್ಲಿ ಇವರು ಅಡುಗೆ ಮಾಡಿ ಹಣ್ಣಾಗಿರ್ಬೋದು. ಸುಖಾಸುಮ್ಮನೆ ಸುಳ್ಳುಹೇಳಿ ಅಮ್ಮನ ಮನೆಯಲ್ಲಿ ಕೂತೇಂತ ರೇಗ್ತಾರೆ' ಎಂದಳು ನಳಿನ.